ಚಾಮರಾಜನಗರ ಜಿಲ್ಲೆಯ ಐತಿಹ್ಯಗಳು

ಕನ್ನಡದಲ್ಲಿ ಪಿಎಚ್. ಡಿ. ಪದವಿಗಾಗಿ
ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ ಅಂತಿಮ
ಸಂಶೋಧನಾ ಸಾರಲೇಖ

ಸಂಶೋಧಕರು

ಶ್ರೀಮತಿ ಸತ್ಯಶೀಲ ಜಿ. ಎಂ.

ನೋಂದಣಿ ವರ್ಷ : 2018

ಮಾರ್ಗದರ್ಶಕರು

ಪ್ರೊ. ಸೋಮಣ್ಣ

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ, ಮಂಗಳೂರು.

2024

ಚಾಮರಾಜನಗರ ಜಿಲ್ಲೆಯ ಐತಿಹ್ಯಗಳು

ಪರಿವಿಡಿ

ಕ್ರಮ. ಸಂಖ್ಯೆ	ಸೂಚೀಕರಣ	ಪುಟ ಸಂಖ್ಯೆ
1	ಪ್ರಸ್ತಾವನೆ	**1**
2	ಅಧ್ಯಯನದ ಉದ್ದೇಶ	**3**
3	ಅಧ್ಯಯನದ ವ್ಯಾಪ್ತಿ	**4**
4	ಅಧ್ಯಯನದ ಮಹತ್ವ	**4**
5	ಅಧ್ಯಯನದ ವಿಧಾನಗಳು	**5**
6	ಅಧ್ಯಯನದ ಸ್ವರೂಪ	**7**
7	ಚಾಮರಾಜನಗರ ಜಿಲ್ಲೆಯ ಜನಪದ ಸಾಹಿತ್ಯದಲ್ಲಿ ಐತಿಹ್ಯಗಳ ಮಹತ್ವ	**8**
8	ಅಧ್ಯಯನದ ಫಲಿತಗಳು	**11**
9	ಮುಂದಿನ ಆಧ್ಯಯನದ ಸಾಧ್ಯತೆಗಳು	**14**
	ಅನುಬಂಧಗಳು	**16**

ಚಾಮರಾಜನಗರ ಜಿಲ್ಲೆಯ ಐತಿಹ್ಯಗಳು

1. ಪ್ರಸ್ತಾವನೆ

"ಚಾಮರಾಜನಗರ ಜಿಲ್ಲೆಯ ಐತಿಹ್ಯಗಳು" ಅಧ್ಯಯನವು ಕರ್ನಾಟಕ ಮಾತ್ರವಲ್ಲದೇ ದಕ್ಷಿಣ ಭಾರತದ ಭಾಷೆ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಮೊದಲಾದ ಅಂಶಗಳ ವಿಶಿಷ್ಟ ಹಾಗೂ ಬಹುಮುಖಿ ಅಧ್ಯಯನವಾಗಿದೆ. ಏಕೆಂದರೆ ಭೌಗೋಳಿಕವಾಗಿ ಮಾತ್ರವಲ್ಲದೇ ಸಾಂಸ್ಕೃತಿಕವಾಗಿಯೂ ವೈವಿಧ್ಯಮಯವಾಗಿರುವ ಚಾಮರಾಜನಗರ ಜಿಲ್ಲೆಯು ಕರ್ನಾಟಕ, ತಮಿಳುನಾಡು ಮತ್ತು ಕೇರಳ ಗಡಿ ರಾಜ್ಯಗಳು ಪರಸ್ಪರ ಸಂಧಿಸುವ, ಆಯಾಕಟ್ಟಿನ ಪ್ರದೇಶವಾಗಿದೆ. ಪೂರ್ವ ಘಟ್ಟಗಳು ಹಾಗೂ ಪಶ್ಚಿಮ ಘಟ್ಟಗಳು ಪರಸ್ಪರ ಸಂಧಿಸುವ ಸಂಪರ್ಕ ಕೇಂದ್ರವಾಗಿದೆ.

ದೇಶಿಯ ಮಾತ್ರವಲ್ಲದೇ ಪಾಶ್ಚಾತ್ಯರ ಪ್ರಭಾವದಿಂದಲೂ, ಪ್ರೇರಣೆ ಹೊಂದಿದ ಸಾಹಿತ್ಯ ಪ್ರಕಾರಗಳಲ್ಲಿ ಐತಿಹ್ಯವೂ ಒಂದು. ಇದು ಗದ್ಯರೂಪದಲ್ಲಿದೆ. ಪ್ರಾಚೀನ ಕಾಲದಿಂದಲೂ ಕೆಲವು ಸಂಗತಿಗಳು ಅಪೂರ್ವವೂ, ಅದ್ಭುತವೂ ಆದ ಸನ್ನಿವೇಶಗಳನ್ನು ಒಳಗೊಳ್ಳುತ್ತಾ, ಪ್ರದೇಶದಿಂದ ಪ್ರದೇಶಕ್ಕೆ, ಜನಾಂಗದಿಂದ ಜನಾಂಗಕ್ಕೆ, ಕಾಲದಿಂದ ಕಾಲಕ್ಕೆ ಸಂಪ್ರದಾಯಗಳು ಹರಿದು ಬರುವಾಗ ಐತಿಹ್ಯಗಳು ರೂಪುಗೊಂಡಿರಬೇಕೆಂದು ತೋರುತ್ತದೆ. ಅಂದರೆ ಐತಿಹ್ಯಗಳು ವ್ಯಕ್ತಿ, ಸ್ಥಳ ಅಥವಾ ಘಟನೆಗಳ ವಾಸ್ತವ ಮತ್ತು ಅವಾಸ್ತವ ನಂಬಿಕೆಗಳನ್ನೊಳಗೊಂಡ ಕಥನಗಳು ಹಾಗೂ ನಡೆದ ಘಟನೆಗಳ ಪಳೆಯುಳಿಕೆಗಳು ಎನ್ನಬಹುದು.

ಐತಿಹ್ಯವು ಸಂಸ್ಕೃತದ 'ಇತಿ', 'ಇತಿಹ' ಎಂಬ ಪದದಿಂದ ನಿಷ್ಪತ್ತಿಯಾಗಿದೆ. ಇದು ವಾಸ್ತವವಾಗಿ ಭೂತಕಾಲದಲ್ಲಿ ನಡೆದ ಘಟನೆಯನ್ನು ವರ್ತಮಾನದಲ್ಲಿ ನಿರೂಪಿಸುವ ಶೈಲಿಯಾಗಿದೆ. ಭಾರತದಲ್ಲಿ ಐತಿಹ್ಯಗಳನ್ನು ಕುರಿತಂತೆ ಇನ್ನೂ ವ್ಯಾಪಕವಾದ ಆಧ್ಯಯನಗಳು ನಡೆಯಬೇಕಿದೆ. ಕರ್ನಾಟಕದಲ್ಲಿ ಎಸ್.ಎಸ್. ಭದ್ರಾಪುರ ಅವರ 'ಉತ್ತರ ಕರ್ನಾಟಕದ ಜನಪದ ಐತಿಹ್ಯಗಳು' ಹಾಗೂ 'ಕನ್ನಡ ಕವಿಗಳ ಮೇಲಿನ ಐತಿಹ್ಯಗಳು' ಇವು ಐತಿಹ್ಯಗಳ ಮೇಲೆ ಆರಂಭದಲ್ಲಿ ರಚಿತವಾದ ಸಂಶೋಧನಾ ಕೃತಿಗಳು. ತದ ನಂತರದಲ್ಲಿ ಐತಿಹ್ಯಗಳನ್ನು ಕುರಿತು ಹಲವಾರು ಕೃತಿಗಳು, ಮಹಾಪ್ರಬಂಧಗಳು, ಲೇಖನಗಳು ಪ್ರಕಟಗೊಂಡಿದ್ದು, ಇವು ಐತಿಹ್ಯಗಳ ಅಧ್ಯಯನಕ್ಕೆ ಹೆಚ್ಚಿನ ಆಯಾಮವನ್ನು ರೂಪಿಸಿದವು. ಈ ನಿಟ್ಟಿನಲ್ಲಿ ಕರಾವಳಿಯ ಪ್ರಮುಖ ಬರಹಗಾರರಾದ ಪುರುಷೋತ್ತಮ ಬಿಳಿಮಲೆ ಅವರು ಐತಿಹ್ಯಗಳನ್ನು ಕುರಿತಂತೆ ವ್ಯಾಪಕವಾದ ಅಧ್ಯಯನವನ್ನು ನಡೆಸಿದರು. ಈ ಹಿನ್ನೆಲೆಯಲ್ಲಿ ಜನಪದ ಸಾಹಿತ್ಯದ ಐತಿಹ್ಯಗಳ ಕುರಿತು ಅಧ್ಯಯನದಲ್ಲಿ ಶಾಸ್ತ್ರೀಯ ಅಧ್ಯಯನಗಳು ಅಂತರ್ ಶಿಸ್ತು ರೂಪುಗೊಳ್ಳಲು ಸಹಾಯವಾಯಿತು.

ಜನಪದ ಸಾಹಿತ್ಯದಲ್ಲಿ 'ಐತಿಹ್ಯ' ಎಂಬ ಪದವೇ ಬಹಳ ವಿಶಿಷ್ಟವಾದುದು, ಏಕೆಂದರೆ ಒಂದು ಸ್ಥಳೀಯ ಚರಿತ್ರೆಯನ್ನು ಹೇಳುವಾಗ ಇದು ಇತಿಹಾಸವೆನಿಸುತ್ತದೆ. ಹಾಗೆಯೇ ಪೌರಾಣಿಕ ಹಿನ್ನೆಲೆಯುಳ್ಳ ಕಾವ್ಯವನ್ನು ನೋಡುವಾಗ ಪುರಾಣ ಎನಿಸುತ್ತದೆ. ಕಥೆ, ಉಪಕಥೆ, ಕಟ್ಟುಕಥೆಗಳನ್ನು ಕೇಳುವಾಗ ದಂತಕತೆ ಅನಿಸುವುದು ಸಹಜ. ಆದ್ದರಿಂದ ಐತಿಹ್ಯಗಳನ್ನು ಕುರಿತ ಸಂಶೋಧನೆಗಳು ಪ್ರಸ್ತುತದಲ್ಲಿ ಅಗತ್ಯವಾಗಿ ನಡೆಯಬೇಕಾಗಿದೆ. ಜನಪದ ಕಥೆಗಳಿಗಿಂತ ಚಿಕ್ಕದಾದ, ಗದ್ಯಾತ್ಮಕವಾದ, ಪರಿಮಿತ ಪಾಠಾಂತರಗಳನ್ನು ಒಳಗೊಂಡ, ನಿರ್ದಿಷ್ಟ ಸ್ಥಳಕ್ಕೆ ಅಂಟಿಕೊಂಡಿರುವ, ವಿಶಿಷ್ಟ ಸ್ವರೂಪದ ಮನೋಜ್ಞವಾದ ಕಥಾನಕವನ್ನು 'ಐತಿಹ್ಯ' ಎಂದು ಹೇಳಬಹುದಾಗಿದೆ. ಖ್ಯಾತ ಜಾನಪದ ತಜ್ಞರಾದ ಜೀ.ಶಂ. ಪರಮಶಿವಯ್ಯ ಅವರ ಅಭಿಪ್ರಾಯದಂತೆ "ಕಂಠಸ್ಥವಾದ ಜಾನಪದವು ಗ್ರಂಥಸ್ಥ ಸ್ವರೂಪವನ್ನು ಪಡೆದುಕೊಂಡು ಸಾಹಿತ್ಯದ ನೆಲೆಯಲ್ಲಿ ಮಹತ್ವವನ್ನು ಪಡೆದುಕೊಂಡಿತು. ತದನಂತರದಲ್ಲಿ 'ಜನಪದಸಾಹಿತ್ಯ' ಎಂಬ ವಿಷಯವಾಗಿ ಮಾರ್ಪಟ್ಟು, ಅಧ್ಯಯನದ ದೃಷ್ಟಿಯಿಂದ ಕಥೆ, ಗೀತೆ, ಗಾದೆ, ಒಗಟು, ಭಾಷೆ, ನಂಬಿಕೆ, ಸಂಪ್ರದಾಯ, ಆಚಾರ–ವಿಚಾರ, ಆರಾಧನೆ, ಲಾವಣಿ, ಐತಿಹ್ಯ, ಪುರಾಣಗಳೆಂಬ ವರ್ಗೀಕರಣಕ್ಕೆ ಒಳಪಟ್ಟು ಅಧ್ಯಯನ ಶಿಸ್ತುಬದ್ಧವಾಗಿ ರೂಪುಗೊಂಡಿತು". ಇತ್ತೀಚಿಗೆ ಕೆಲವು ಜಾನಪದ ವಿದ್ವಾಂಸರು ಐತಿಹ್ಯವೆಂಬುದನ್ನು ಕಂಠಸ್ಥವಾಗಿ ಪ್ರಸಾರಗೊಂಡು ಬಂದ ಕಥೆಗಳಿಗೆ ಅನ್ವಯಿಸಿ, ಇದರ ಅರ್ಥವನ್ನು ವಿವರಿಸುವ ಪ್ರಯತ್ನವನ್ನು ಮಾಡಿದ್ದಾರೆ.

ಸಾಹಿತ್ಯ ಎನ್ನುವುದು 'ಮಾನವನ ಬದುಕಿನ ಪ್ರತಿಬಿಂಬ' ಎನ್ನುವ ಮಾತಿದೆ. ಅಂತೆಯೇ ಅದು ನಿಂತ ನೀರಾಗದೆ, ಸದಾ ಚಲನಶೀಲವಾಗಿ ಹರಿಯುವ ನೀರಿನ ತೊರೆಯಂತೆ ಪ್ರದೇಶದಿಂದ ಪ್ರದೇಶಕ್ಕೆ ತನ್ನ ವೈಶಿಷ್ಟತೆಯನ್ನು ಅನಾವರಣಗೊಳಿಸುತ್ತದೆ. ಮಾನವನು ಪ್ರಕೃತಿಯಲ್ಲಿ ಜನಿಸಿದಾಗಿನಿಂದಲೂ ಆತನಿಗೆ ನೆಲದ ಬಗೆಗಿನ ಅರಿವು ಉಂಟಾದಾಗಿನಿಂದ ಅವನಲ್ಲಿ ಅನೇಕ ರೀತಿಯ ಹೊಳಹುಗಳು, ಆಲೋಚನೆಗಳು ಉದ್ಭವಿಸತೊಡಗಿದವು. ಆ ನೆಲೆಯಲ್ಲಿಯೇ ಹಾಡು, ಕಥೆ, ಲಾವಣಿ, ನೃತ್ಯಗಳನ್ನೊಳಗೊಂಡ ಬದುಕಿನ ದರ್ಶನವೂ ಉಂಟಾಗಿ ಅದು ಜನಪದವೆಂಬ ಹೆಸರಿನಲ್ಲಿ ಅಂತರ್ಗತವಾಯಿತು. ಜೊತೆ ಜೊತೆಗೆ ಉಸಿರಾಟದ ಪ್ರಕ್ರಿಯೆಂತೆಯೇ ಜನಪದವು ಮಾನವನ ಬದುಕಿನೊಟ್ಟಿಗೆ ಮಿಲನಗೊಂಡಿದೆ. ಆಹಾರಕ್ಕಾಗಿ ಬೆಟ್ಟ–ಗುಡ್ಡಗಳನ್ನು ಅಲೆದಾಡುವುದು, ಹಾಡುವುದು, ಕುಣಿಯುವುದು, ಪ್ರಾಣಿ ಪಕ್ಷಿಗಳನ್ನು ಸಾಕುವುದು, ಗಿಡಮರಗಳನ್ನು ನೆಡುವುದು ಹೀಗೆ ಒಂದಿಲ್ಲೊಂದು ಮನೋರಂಜನಾತ್ಮಕವಾದ ಕಲೆಗಳನ್ನು ರೂಢಿಸಿಕೊಂಡು ನಂತರ ಹಾಡು, ಕಥೆಗಳಾಗಿ ಕಟ್ಟಿ ಹೇಳುವ ಪರಿಪಾಠವನ್ನು ಬೆಳೆಸಿಕೊಂಡ ತಾನು ಕಂಡು ಕೇಳಿದ ತನ್ನ ಸುತ್ತಮುತ್ತಲಿನ ಘಟನೆಗಳ ಸಾರವನ್ನು

ಮೌಖಿಕ ಪರಂಪರೆಯ ಮೂಲಕ ಪೀಳಿಗೆಯಿಂದ ಪೀಳಿಗೆಗೆ ಸಾಗಿಸುವ ಸಂವಹನಕಾರನಾಗಿಯೂ ಕಾರ್ಯ ನಿರ್ವಹಿಸಿದ. ಕಾಲ ಬದಲಾದಂತೆ ಈ ಮೌಖಿಕ ಪರಂಪರೆಯು ಗ್ರಂಥಸ್ಥವಾಗಿ, ಅಧ್ಯಯನಕಾರರಿಗೆ ಆಸಕ್ತಿಯ ವಿಷಯವಾಗಿ ಪರಿಣಮಿಸಿತು.

ಜಾನಪದ ಸಂಶೋಧನಾ ಕ್ಷೇತ್ರದಲ್ಲಿ ಐತಿಹ್ಯಗಳನ್ನು ಕುರಿತಂತೆ ಜಿಲ್ಲಾವಾರು ವ್ಯಾಪ್ತಿಯಲ್ಲಿ ಸಾಕಷ್ಟು ಅಧ್ಯಯನಗಳು ನಡೆದಿರುವುದು ಕಂಡು ಬಂದಿದೆ. ಇದರಿಂದಾಗಿ ಆ ಪ್ರದೇಶದ ಐತಿಹಾಸಿಕ ಹಾಗೂ ಸಾಂಸ್ಕೃತಿಕವಾದ ಸ್ಥಳೀಯ ಪರಂಪರೆಯ ಮಹತ್ವವನ್ನು ತಿಳಿದುಕೊಳ್ಳಲು ಸಹಕಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಂಡಿರುವ "ಚಾಮರಾಜನಗರ ಜಿಲ್ಲೆಯ ಐತಿಹ್ಯಗಳು" ಎಂಬ ವಿಷಯದ ಅಧ್ಯಯನ ಸ್ಥಳೀಯ ಇತಿಹಾಸಕ್ಕೆ ಹೇಗೆ ನೆರವಾಗಬಹುದು?. ಐತಿಹ್ಯಗಳು ಪ್ರದೇಶದಿಂದ ಪ್ರದೇಶಕ್ಕೆ ಹೇಗೆ ಭಿನ್ನವಾಗಿವೆ?. ಈ ಹಿಂದಿನ ಅಧ್ಯಯನಗಳಿಗೆ ವಿಶಿಷ್ಟವಾದ ಹಾಗೂ ಮಹತ್ವ ಪೂರ್ಣ ನೆಲೆಯಲ್ಲಿ ಅಧ್ಯಯನವನ್ನು ಬಿಂಬಿಸಲು ಪ್ರಯತ್ನಿಸಲಾಗಿದೆ. ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಕಂಡುಬರುವ ಭೌಗೋಳಿಕ, ಐತಿಹಾಸಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯ ವೈವಿಧ್ಯತೆಯನ್ನೊಳಗೊಂಡ ಸಂಗತಿಗಳನ್ನು ಇಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ. ಜೊತೆಗೆ ಆಧುನಿಕ ಯುಗದಲ್ಲಿ ಐತಿಹ್ಯವು ಹೇಗೆ ಜನಪ್ರಿಯತೆಯನ್ನು ಉಳಿಸಿಕೊಂಡು ಬಂದಿದೆ ಎಂಬ ಅಂಶದೊಂದಿಗೆ ಅದರ ಪ್ರಾಮುಖ್ಯತೆಯನ್ನು ಗ್ರಹಿಸಲು ಪ್ರಯತ್ನಿಸಲಾಗಿದೆ.

2. ಅಧ್ಯಯನದ ಉದ್ದೇಶ

೧. ಚಾಮರಾಜನಗರ ಜಿಲ್ಲೆಯಲ್ಲಿ ಕಂಡುಬರುವ ಐತಿಹ್ಯಗಳ ಕುರಿತು ಅಧ್ಯಯನ ಮಾಡಲಾಗುವುದು.

೨. ಐತಿಹಾಸಿಕ, ಪೌರಾಣಿಕ, ಸಾಮಾಜಿಕ ಹಾಗೂ ಜಾನಪದೀಯ ಐತಿಹ್ಯಗಳ ಮಹತ್ವವನ್ನು ಚರ್ಚಿಸಲಾಗುವುದು.

೩. ಚಾಮರಾಜನಗರ ಜಿಲ್ಲೆಯಲ್ಲಿ ಸಂಸ್ಕೃತಿಯ ಮೂಲಪುರುಷರು, ಸಾಂಸ್ಕೃತಿಕ ವೀರರು, ವೀರರಮಣಿಯರು ಮತ್ತು ಮಾನವನ ಅಸ್ತಿತ್ವದ ಕುರಿತಾದ ಐತಿಹ್ಯಗಳನ್ನು ಅಧ್ಯಯನ ಮಾಡಲಾಗುವುದು.

೪. ಸ್ಥಳನಾಮಗಳಲ್ಲಿ ಐತಿಹ್ಯಗಳ ಹಿನ್ನೆಲೆಯನ್ನು ಹೊಂದಿರುವ ಸ್ಥಳ, ಧಾರ್ಮಿಕ ಕ್ಷೇತ್ರ, ಸ್ಥಳಪುರಾಣ, ಬೆಟ್ಟ–ಗುಡ್ಡ, ಜಲ, ಕೋಟೆ–ಕೊತ್ತಲುಗಳಿಗೆ ಸಂಬಂಧಿಸಿದ ಐತಿಹ್ಯಗಳನ್ನು ಚರ್ಚಿಸಲಾಗುವುದು.

೫. ಚಾಮರಾಜನಗರ ಜಿಲ್ಲೆಯಲ್ಲಿ ಕಂಡುಬರುವ ಕೃಷಿ, ಪ್ರಾಣಿ ಮತ್ತು ಸಸ್ಯಗಳು, ಆಚರಣೆ ಮತ್ತು ನಿಷೇಧಗಳು ಹಾಗೂ ಬಲಿದಾನಕ್ಕೆ ಸಂಬಂಧಿಸಿದ ಐತಿಹ್ಯಗಳನ್ನು ಕುರಿತು ಚರ್ಚಿಸಲಾಗುವುದು.

೬. ಚಾಮರಾಜನಗರ ಜಿಲ್ಲೆಯಲ್ಲಿರುವ ವಿವಿಧ ಐತಿಹ್ಯಗಳಿಂದ ಸಮಾಜಕ್ಕೆ ಅರ್ಥವಾಗುವ ನಿಜ ಸಂಗತಿಗಳು ಮತ್ತು ಸತ್ಯದ ದರ್ಶನವನ್ನು, ಆಧುನಿಕ ಸಮಾಜಕ್ಕೆ ಮಾರ್ಗದರ್ಶಿಯಾದ ಐತಿಹ್ಯಗಳ ಮಹತ್ವವನ್ನು ಸೂಕ್ಷ್ಮವಾಗಿ ಚರ್ಚಿಸಲಾಗುವುದು.

೩. ಅಧ್ಯಯನದ ವ್ಯಾಪ್ತಿ

ಜನಪದ ಸಾಹಿತ್ಯ ಪರಂಪರೆಗಳನ್ನು ಬಹುತ್ವದ ನೆಲೆಯಲ್ಲಿ ಬಿಂಬಿಸುವ ಭೌಗೋಳಿಕ ವಿಸ್ತೀರ್ಣವನ್ನು ಒಳಗೊಂಡಿರುವ ಚಾಮರಾಜನಗರ ಜಿಲ್ಲೆಯು ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ, ಯಳಂದೂರು ಮತ್ತು ಹನೂರು ಎಂಬ ಐದು ತಾಲ್ಲೂಕುಗಳನ್ನು ಹೊಂದಿದೆ. ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಪ್ರಚಲಿತವಾಗಿರುವ ಐತಿಹ್ಯಗಳನ್ನು ಅಧ್ಯಯನದ ವ್ಯಾಪ್ತಿಯಲ್ಲಿ ಅಳವಡಿಸಲಾಗಿದೆ. ಸಂಶೋಧನೆಯ ಸಂದರ್ಭದಲ್ಲಿ ದೊರೆತ ಆಕರ ಸಾಮಗ್ರಿಗಳನ್ನು ಅಧ್ಯಯನಕ್ಕೆ ಸೂಕ್ತವಾದ ರೀತಿಯಲ್ಲಿ ವರ್ಗೀಕರಿಸಿಕೊಂಡು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

೪. ಅಧ್ಯಯನದ ಮಹತ್ವ

ಕರ್ನಾಟಕದ ಗಡಿ ಜಿಲ್ಲೆಯಾದ ಚಾಮರಾಜನಗರಕ್ಕೆ ಸಂಬಂಧಿಸಿದಂತೆ ಸ್ಥಳನಾಮಗಳು, ಗ್ರಾಮದೇವತೆಗಳು, ಬುಡಕಟ್ಟು ಸಮುದಾಯಗಳಿಗೆ ಸಂಬಂಧಿಸಿದಂತೆ, ವಿವಿಧ ಜನಾಂಗಗಳ ಬಗ್ಗೆ ಅಧ್ಯಯನ ನಡೆದಿವೆ. ಈ ಜಿಲ್ಲೆಯಲ್ಲಿ ಕಾಣಸಿಗುವ ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳ ಬಗ್ಗೆ ಶಾಸನೋಕ್ತ ಅಧ್ಯಯನ, ಶಾಸನಗಳ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ, ಈ ಭಾಗದ ಜನರ ಭಾಷೆಯ ಬಗ್ಗೆ ಭಾಷಿಕ ಅಧ್ಯಯನ, ಇಲ್ಲಿನ ವಿಶಿಷ್ಟ ರೀತಿಯ ಆಚಾರ–ವಿಚಾರ, ಸಂಪ್ರದಾಯ, ನಂಬಿಕೆ, ಸಂಸ್ಕೃತಿಯ ಕುರಿತು ತಾಲ್ಲೂಕುವಾರು ಸಾಂಸ್ಕೃತಿಕ ಅಧ್ಯಯನ, ಈ ಪ್ರದೇಶದ ದನಗಳ ಬಗ್ಗೆ, ಕೃಷಿಯ ಬಗ್ಗೆ ಜಾನಪದೀಯ ಅಧ್ಯಯನ, ಈ ಭಾಗದಲ್ಲಿ ಆಳ್ವಿಕೆ ನಡೆಸಿದ ರಾಜ ಮಹಾರಾಜರ ಬಗ್ಗೆ, ವಿವಿಧ ಧರ್ಮಗಳ ಪರಂಪರೆಯ ಬಗ್ಗೆ, ಇಲ್ಲಿನ ದೇವಾಲಯಗಳ ವಾಸ್ತುಶಿಲ್ಪಗಳ ಬಗ್ಗೆ ಅಧ್ಯಯನಗಳು ನಡೆದಿವೆ. ಇಷ್ಟೇ ಅಲ್ಲದೇ ಜನಪದ ಮಹಾಕಾವ್ಯಗಳ ಸಂಗ್ರಹಣೆ, ವೃತ್ತಿಗಾಯಕರು, ತತ್ವಪದಕಾರರು, ಸಾಂಸ್ಕೃತಿಕ ಅಂಶಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಆದರೆ ಜಿಲ್ಲೆಯಲ್ಲಿ ಅಪಾರ ಪ್ರಮಾಣದಲ್ಲಿ ಸಿಗುವ ಐತಿಹ್ಯಗಳ

ಬಗೆಗೆ ಇದುವರೆಗೂ ಯಾವುದೇ ರೀತಿಯ ಅಧ್ಯಯನಗಳು ನಡೆದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಈ ಪ್ರಸ್ತುತ ಅಧ್ಯಯನವು ಬಹಳ ಮಹತ್ವವನ್ನು ಪಡೆದುಕೊಂಡಿದೆ. ಐತಿಹಾಸಿಕ, ಸಾಂಸ್ಕೃತಿಕ, ಜಾನಪದೀಯ, ಪೌರಾಣಿಕವಾಗಿ ಹಲವಾರು ಅಂಶಗಳನ್ನು ಮೌಖಿಕ ಮತ್ತು ಗ್ರಂಥಸ್ಥ ಪರಂಪರೆಯಲ್ಲಿ ಉಳಿಸಿಕೊಂಡು ಬಂದಿರುವ ಚಾಮರಾಜನಗರ ಜಿಲ್ಲೆಯಲ್ಲಿ ಹಲವಾರು ಐತಿಹ್ಯಗಳು ಮಿಳಿತಗೊಂಡಿವೆ. ಅವು ವ್ಯಕ್ತಿ, ಪ್ರಾಣಿ, ಕೆರೆ ಕಟ್ಟೆ, ಆಳ್ವಿಕೆ, ಘಟನೆ, ಸ್ಥಳ ಮತ್ತು ಇತಿಹಾಸ, ಇವೇ ಮೊದಲಾದ ಅಂಶಗಳ ಹಿನ್ನೆಲೆಯಲ್ಲಿ ಕಾಣಲಾಗುತ್ತದೆ. ಹಾಗಾಗಿ ಇಂತಹ ಮಹತ್ವದ ಐತಿಹ್ಯಗಳನ್ನು ಶೋಧಿಸುವುದು ಪ್ರಸ್ತುತ ಮಹಾಪ್ರಬಂಧದ ಮೂಲ ಉದ್ದೇಶವಾಗಿದೆ.

೫. ಅಧ್ಯಯನದ ವಿಧಾನಗಳು

'ಚಾಮರಾಜನಗರ ಜಿಲ್ಲೆಯ ಐತಿಹ್ಯಗಳು' ಎಂಬ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಸಂಶೋಧನಾ ವಿಧಾನಗಳನ್ನು ಅನುಸರಿಸಲಾಗಿದೆ.

- ❖ ಅವಲೋಕನ ವಿಧಾನ(observation)ದ ಮೂಲಕ 'ಚಾಮರಾಜನಗರ ಜಿಲ್ಲೆಯ ಐತಿಹ್ಯ'ಗಳಿಗೆ ಸಂಬಂಧಿಸಿದ ಐತಿಹ್ಯಗಳ ಕುರುಹುಗಳು, ಜನರ ಆಚರಣೆ, ಜನರ ನಂಬಿಕೆಗಳು ಮತ್ತು ಐತಿಹ್ಯಗಳ ಸತ್ಯಾಸತ್ಯತೆಯನ್ನು ಅರಿಯಲು ಸಾಧ್ಯವಾಗಿದೆ.
- ❖ ಚಾಮರಾಜನಗರ ಜಿಲ್ಲೆಯ ಐತಿಹ್ಯಗಳಿಗೆ ಸಂಬಂಧಿಸಿದ ವಿಷಯವನ್ನು ಕುರಿತಂತೆ ಕ್ಷೇತ್ರಕಾರ್ಯ(Fild study) ಮತ್ತು ಸಮಗ್ರ ಸಮೀಕ್ಷಾ (Survie) ವಿಧಾನದ ಮೂಲಕ ಅಧ್ಯಯನ ಕೈಗೊಳ್ಳಲಾಗಿದೆ.
- ❖ ಪ್ರಸ್ತುತ ಈ ಐತಿಹ್ಯದ ವಿಷಯಕ್ಕೆ ಸಂಬಂಧಿಸಿದಂತೆ ಈ ಅಧ್ಯಯನವು ಐತಿಹಾಸಿಕ ವಿಧಾನದ (Historical Method) ಮೂಲಕ ಚಾಮರಾಜನಗರ ಜಿಲ್ಲೆಯ ಐತಿಹ್ಯಗಳಿಗೆ ಸಂಬಂಧಿಸಿದಂತೆ ಅದರ ಸ್ವರೂಪ, ವ್ಯಾಪ್ತಿ, ಅಲ್ಲಿನ ಭೌಗೋಳಿಕ ಅಂಶಗಳ ಪ್ರಭಾವವನ್ನು ಅಧ್ಯಯನ ಮಾಡಲು ಸಹಾಯಕವಾಗಿದೆ.
- ❖ ವಿಶ್ಲೇಷಣಾ (Analytical) ಮತ್ತು ವಿವರಣಾತ್ಮಕ ವಿಧಾನ (Discriptive)ಗಳ ಮೂಲಕ ಎಲ್ಲಾ ಸಂಗ್ರಹಿತ ಪ್ರಾಥಮಿಕ, ಮೂಲ ಆಕರಗಳು, ಕೃತಿಗಳು, ಲೇಖನಗಳು ಮತ್ತು ಮಹಾಪ್ರಬಂಧಗಳ ಮಾಹಿತಿಗಳನ್ನು ಕ್ರಮಬದ್ಧವಾಗಿ, ವಸ್ತುನಿಷ್ಠವಾಗಿ ಹಾಗೂ ವ್ಯವಸ್ಥಿತವಾಗಿ

ವಿಶ್ಲೇಷಿಸಿ, ವಿವಿಧ ಬಗೆಯ ಕೃತಿಗಳಲ್ಲಿನ ಐತಿಹ್ಯಗಳನ್ನು ಸೂಕ್ಷ್ಮವಾಗಿ, ವಿಶ್ಲೇಷಣಾತ್ಮಕವಾಗಿ ಅಧ್ಯಯನ ನಡೆಸಲಾಗಿದೆ.

❖ ಪ್ರಾಯೋಗಿಕ (Empirical) ಮತ್ತು ಸಂದರ್ಶನದ ವಿಧಾನದಿಂದ (interview method) ಅಲ್ಲಿನ ವಕ್ತೃಗಳು ನೀಡಿರುವ ವಿಶಿಷ್ಟ ಮಾಹಿತಿಗಳನ್ನು ಪ್ರಶ್ನಾವಳಿಗಳ ಮೂಲಕ ಕಲೆ ಹಾಕಲಾಗಿದೆ. ಲಾವಣಿಗಳು, ರೂಢಿ, ಸಂಪ್ರಾದಾಯಗಳು, ಪದ್ಧತಿಗಳು, ಆಚಾರ ವಿಚಾರಗಳು, ಕಥೆ, ಗೀತೆ, ಲಾವಣಿ, ಗಾದೆ, ಪುರಾಣಗಳ ಕಥೆಗಳು, ವೀರಕಥೆಗಳನ್ನು ತಿಳಿದುಕೊಳ್ಳುವುದರ ಜೊತೆಗೆ ಜನರಿಂದ ಪಡೆದ ಮಾಹಿತಿಗಳನ್ನು ಅವರು ಬಳಸುವ ಭಾಷೆ ಮತ್ತು ನಿರೂಪಣಾ ಶೈಲಿಯನ್ನು ಗ್ರಹಿಸಿ ಪ್ರಸ್ತುತ ಅಧ್ಯಯನವನ್ನು ನಡೆಸಲಾಗಿದೆ.

೬. ಅಧ್ಯಯನದ ಸ್ವರೂಪ

ಮೊದಲನೆಯ ಅಧ್ಯಾಯವಾದ ಪೀಠಿಕೆಯಲ್ಲಿ ಚಾಮರಾಜನಗರ ಜಿಲ್ಲೆಯ ಐತಿಹ್ಯಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಅವುಗಳ ಬಗೆಗೆ ಪ್ರಸ್ತಾವನೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ವಿಧಾನಗಳು, ಸ್ವರೂಪ, ವಿಷಯಾಧಾರಿತ ಸಾಹಿತ್ಯ ಸಮೀಕ್ಷೆ, ಚಾಮರಾಜನಗರ ಜಿಲ್ಲೆಯನ್ನು ಕುರಿತಂತೆ ಇದುವರೆಗೆ ನಡೆದಿರುವ ಸಂಶೋಧನಾ ಅಧ್ಯಯನಗಳನ್ನು ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯವಾದ ಚಾಮರಾಜನಗರ ಜಿಲ್ಲೆಯ ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನಲೆಯಲ್ಲಿ ಚಾಮರಾಜನಗರ ಜಿಲ್ಲೆಯ ಭೌಗೋಳಿಕ ಪರಿಚಯವನ್ನು ಮಾಡಿಕೊಡಲಾಗಿದೆ. ಅಲ್ಲಿನ ಜಾನಪದ ಸಾಹಿತ್ಯದ ವೈಶಿಷ್ಟ್ಯಗಳಲ್ಲಿನ ಐತಿಹ್ಯಗಳ ಮಹತ್ವವನ್ನು ಅದರ ವೈವಿಧ್ಯತೆಯನ್ನು ಗುರುತಿಸಿ ಪರಿಚಯಿಸಲಾಗಿದೆ. ಚಾಮರಾಜನಗರ ಜಿಲ್ಲೆಯ ಇತಿಹಾಸವನ್ನು ರೂಪಿಸುವಲ್ಲಿ ಐತಿಹ್ಯಗಳ ಪಾತ್ರವನ್ನು ದಾಖಲಿಸಲಾಗಿದೆ.

ಮೂರನೆಯ ಅಧ್ಯಾಯವಾದ 'ಐತಿಹ್ಯಗಳ ಅರ್ಥ, ಸ್ವರೂಪ ಮತ್ತು ಉಗಮ'ದಲ್ಲಿ ಐತಿಹ್ಯ ಎಂದರೇನು? ಆ ಪದದ ನಿಷ್ಪತ್ತಿ, ಐತಿಹ್ಯದ ಕುರಿತ ವ್ಯಾಖ್ಯಾನಗಳನ್ನು ಮತ್ತು ಅವುಗಳ ಮಹತ್ವವನ್ನು ಇಲ್ಲಿ ವಿವರಿಸಲಾಗಿದೆ. ಪೀಳಿಗೆಯಿಂದ ಪೀಳಿಗೆಗೆ ಮೌಖಿಕ ಪರಂಪರೆಯ ಮೂಲಕ ಇನ್ನು ಉಳಿದುಕೊಂಡಿರುವ ಐತಿಹ್ಯಗಳನ್ನು ಕುರಿತಂತೆ ಮೌಖಿಕ ನೆಲೆಗಳ ಐತಿಹ್ಯ, ಇತಿಹಾಸ ಮತ್ತು ಐತಿಹ್ಯಗಳ ನಡುವಿನ ಸಂಬಂಧ ಹಾಗೂ ಲಿಖಿತ ಮೂಲಗಳ ಐತಿಹ್ಯಗಳನ್ನು ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯವಾದ 'ವ್ಯಕ್ತಿ ಕೇಂದ್ರಿತ ಐತಿಹ್ಯಗಳು' ಎಂಬ ಅಧ್ಯಾಯದಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಸಂಸ್ಕೃತಿಯನ್ನು ಕಟ್ಟಿದ ಮೂಲಪುರುಷರ ಬಗ್ಗೆ ಹಾಗೂ ಆ ಸಂಸ್ಕೃತಿಯನ್ನು ಕಟ್ಟಿ ಬೆಳೆಸಿಕೊಂಡು ಬಂದಂತಹ ಸಾಂಸ್ಕೃತಿಕ ವೀರರ ಬಗ್ಗೆ ವಿವರಿಸಲಾಗಿದೆ. ಈ ಭಾಗದ ವೀರ ರಮಣಿಯರ ಕುರಿತು ಮತ್ತು ಮಾನವನ ಅಸ್ತಿತ್ವ ಕುರಿತ ಐತಿಹ್ಯಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಲಾಗಿದೆ.

ಐದನೆಯ ಅಧ್ಯಾಯವಾದ 'ಸ್ಥಳ ಸಂಬಂಧಿ ಐತಿಹ್ಯಗಳು' ಎಂಬ ಅಧ್ಯಾಯದಲ್ಲಿ ಚಾಮರಾಜನಗರ ಜಿಲ್ಲೆಯ ಪ್ರಮುಖ ಸ್ಥಳಗಳ ಮಹತ್ವವನ್ನು ತಿಳಿಯಲು 'ಸ್ಥಳನಾಮಗಳು' ಎಂಬ ಉಪ ಶೀರ್ಷಿಕೆಯಲ್ಲಿ ನೀಡಲಾಗಿದೆ. ಇದಲ್ಲದೇ ಪ್ರತ್ಯೇಕವಾಗಿ ಬೇರೆ ಬೇರೆ ಗ್ರಾಮದ ಊರುಗಳ ಬಗ್ಗೆ ಸಿಗುವ ಐತಿಹ್ಯಗಳ ಹಿನ್ನೆಲೆಯಿಂದ ಉಗಮಗೊಂಡಿರುವ ಸ್ಥಳನಾಮಗಳ ಬಗ್ಗೆ ಚರ್ಚಿಸಲಾಗಿದೆ. ಈ ಜಿಲ್ಲೆಯಲ್ಲಿರುವ ಧಾರ್ಮಿಕ ಪುಣ್ಯಕ್ಷೇತ್ರ, ಸ್ಥಳಪುರಾಣ, ಬೆಟ್ಟ–ಗುಡ್ಡ ಜಲಮೂಲಗಳು ಹಾಗೂ ಕೋಟೆ–ಕೊತ್ತಲುಗಳ ಬಗ್ಗೆ ವಿವರಣಾತ್ಮಕವಾಗಿ ವಿಶ್ಲೇಷಣೆ ಮಾಡಲಾಗಿದೆ.

ಆರನೆಯ ಅಧ್ಯಾಯವಾದ 'ಘಟನಾ ಪ್ರಧಾನ ಐತಿಹ್ಯಗಳು' ಎಂಬ ಅಧ್ಯಾಯದಲ್ಲಿ ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಜೀವಂತಿಕೆಯ ಮೂಲ ಮತ್ತು ವಿಕಾಸವನ್ನು ಕುರಿತಂತೆ ಹೇಳುವ ಐತಿಹ್ಯಗಳ ಬಗೆಗೆ ಚರ್ಚಿಸಲಾಗಿದೆ. ಪ್ರಾಣಿಗಳು, ಸಸ್ಯಗಳು, ಕೃಷಿ, ಆಚರಣೆ ಮತ್ತು ನಿಷೇಧಗಳು ಹಾಗೂ ಬಲಿದಾನಕ್ಕೆ ಸಂಬಂಧಿಸಿದ ಐತಿಹ್ಯಗಳನ್ನು ಕುರಿತು ಚರ್ಚಿಸಲಾಗಿದೆ.

ಏಳನೆಯ ಅಧ್ಯಾಯವಾದ 'ಐತಿಹ್ಯಗಳು ಕಟ್ಟಿಕೊಡುವ ಸತ್ಯ–ಮಿಥ್ಯಗಳು' ಎಂಬ ಅಧ್ಯಾಯದಲ್ಲಿ ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಐತಿಹ್ಯಗಳಿಂದ ಸಮಾಜಕ್ಕೆ ಅರ್ಥವಾಗುವ ನಿಜ ಸಂಗತಿಗಳು ಮತ್ತು ಸತ್ಯದ ದರ್ಶನವನ್ನು ಸೂಕ್ಷ್ಮವಾಗಿ ಚರ್ಚಿಸಲಾಗಿದೆ.

ಎಂಟನೆಯ ಅಧ್ಯಾಯ ಸಮಾರೋಪವಾಗಿದ್ದು, ಇದರಲ್ಲಿ ಅಧ್ಯಯನದ ಫಲಿತಗಳನ್ನು ಹಾಗೂ ಮುಂದಿನ ಅಧ್ಯಯನದ ಸಾಧ್ಯತೆಗಳನ್ನು ತಿಳಿಸಲಾಗಿದೆ. ಅನುಬಂಧದಲ್ಲಿ ಅಧ್ಯಯನಕ್ಕೆ ಪೂರಕವಾದ ಪರಾಮರ್ಶನ ಗ್ರಂಥಗಳನ್ನು ನೀಡಲಾಗಿದೆ. ಇದರಲ್ಲಿ ಪ್ರಾಥಮಿಕ ಮತ್ತು ಅನುಷಂಗಿಕ ಆಕರಗಳನ್ನು ತಿಳಿಸಲಾಗಿದೆ. ಅಲ್ಲದೆ ವಕ್ತೃಗಳ ವಿವರ, ಪ್ರಶ್ನಾವಳಿ, ನಕ್ಷೆ ಮತ್ತು ಛಾಯಾಚಿತ್ರಗಳನ್ನು ಗುರುತಿಸಲಾಗಿದೆ.

೭. ಚಾಮರಾಜನಗರ ಜಿಲ್ಲೆಯ ಜನಪದ ಸಾಹಿತ್ಯದಲ್ಲಿ ಐತಿಹ್ಯಗಳ ಮಹತ್ವ

'ಜನಪದ' ಎಂಬ ಪದವೇ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟವಾದ ಅರ್ಥವನ್ನು ಹೊಂದಿದೆ. ಜನಪದ ಎಂದರೆ ಜನರ ಗುಂಪು, ಜನರ ಸಮೂಹ, ಅನಕ್ಷರಸ್ಥರು, ಹಳ್ಳಿಗರು, ಹಿಂದಿನ ತಲೆಮಾರಿನವರು ಎಂಬ

ವಿವಿಧಾರ್ಥಗಳನ್ನು ಒಳಗೊಂಡಿದೆ. ಜನಪದರಿಂದ ರಚಿತವಾದ ಸಾಹಿತ್ಯ ಜನಪದ ಸಾಹಿತ್ಯ. ಇದು ಮೌಖಿಕ ಪರಂಪರೆಯುಳ್ಳದ್ದು, ಕಥೆ, ಗೀತೆ, ಲಾವಣಿ, ಗಾದೆ, ಪುರಾಣಗಳೇ ಐತಿಹ್ಯ ಪ್ರಕಾರಗಳಾಗಿವೆ. ಹಾಗಾಗಿ ಸಾಹಿತ್ಯದ ನೈಜ ಬೇರು ಅಡಗಿರುವುದೇ ಜನಪದ ಸಾಹಿತ್ಯದಲ್ಲಿ ಎಂಬುದು ಸರ್ವವಿಧಿತವಾಗಿದೆ. ಸಾಹಿತ್ಯಕ್ಕೂ ಮತ್ತು ಜನಪದರಿಗೂ 'ಒಕ್ಕಳು ಬಳ್ಳಿಯ' ಸಂಬಂಧವಿದೆ. ಏಕೆಂದರೆ 'ಆನೆ ನಡೆದದ್ದೆ ದಾರಿ' ಎಂಬಂತೆ ಜನಪದರು ರಾಗ ಕಟ್ಟಿ ಹಾಡಿದ್ದೆ ಒಂದು ಗೀತೆ, ಅಂತೆಯೇ ಜೀವನಾನುಭವಗಳ ಮಾತೇ ಗಾದೆ. ಹೀಗೆ ತಮ್ಮ ಸುತ್ತಮುತ್ತಲಿನ ವಸ್ತುಗಳೊಡನೆ ನಿಕಟವರ್ತಿಗಳಾಗಿಯೂ, ಕಲೆಗಳನ್ನು ಕರಗತಗೂಳಿಸುವ ಸಂಸ್ಕೃತಿಯ ಪೋಷಕರೇ ಜನಪದರು. ಆದರೆ ಸಂಸ್ಕೃತಿಯೆಂಬುದು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ ಸ್ವರೂಪವನ್ನು ಪಡೆದುಕೊಂಡಿವೆ. ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಚರಿಸುವ ಕೋಲ, ಪಂಜುರ್ಲಿ ದೈವದ ಪರಿಕಲ್ಪನೆಗೂ, ಉತ್ತರ ಕರ್ನಾಟಕದಲ್ಲಿನ ಎಲ್ಲಮ್ಮನ ದೈವ ಭಕ್ತಿಗೂ, ಬೆಂಗಳೂರಿನ ಕರಗ ಮಹೋತ್ಸವಕ್ಕೂ ಭಿನ್ನತೆಯನ್ನು ಕಾಣಬಹುದಾಗಿದೆ. ಇವುಗಳ ಹಿನ್ನೆಲೆಯನ್ನು ಹುಡುಕುತ್ತ ಹೋದಂತೆ, ಒಂದೊಂದು ಆಚರಣೆಗೂ ಮೂಲ ಕಥೆ ಇರುವುದು ಗೋಚರವಾಗುತ್ತದೆ. ಈ ಕಥೆಗಳು ಒಂದು ಕಾಲದಲ್ಲಿ ಐತಿಹ್ಯಗಳೇ ಆಗಿದ್ದವು. ಇವುಗಳನ್ನು ಜಾನಪದೀಯ ನೆಲೆಯಲ್ಲಿ ಅಭ್ಯಾಸಿಸುವುದು ಅಗತ್ಯವಾಗಿದೆ. ಇದಕ್ಕೆ ಪೂರಕವಾಗಿ ಐತಿಹ್ಯಗಳು ನೆರವಾಗುತ್ತವೆ. ಇಂತಹ ಎಷ್ಟೋ ಐತಿಹ್ಯಗಳು ಇಂದಿಗೂ ನೋಡಬಹುದಾಗಿದೆ. ಅಂತೆಯೇ 'ಜಾನಪದ ಕಲೆಗಳ ತವರು' ಎಂಬ ಹೆಗ್ಗಳಿಕೆಗೆ ಪಾತ್ರವಾದ ಚಾಮರಾಜನಗರ ಜಿಲ್ಲೆಯಲ್ಲಿಯೂ ಸಹ ಐತಿಹ್ಯಗಳು ಹೇರಳವಾಗಿ ಲಭಿಸುತ್ತವೆ. ಈ ಜಿಲ್ಲೆಯು ಹೊಂದಿರುವ ಐತಿಹಾಸಿಕ ಹಾಗೂ ಭೌಗೋಳಿಕ ಲಕ್ಷಣದ ಆಧಾರದ ಹಿನ್ನೆಲೆಯಲ್ಲಿ ದೇಶದಾದ್ಯಂತ ಹೆಸರುವಾಸಿಯಾಗಿದೆ. ಜನಪದ ಮಹಾಕಾವ್ಯಗಳಾದ ಮಲೆ ಮಹದೇಶ್ವರ ಮತ್ತು ಮಂಟೇಸ್ವಾಮಿ ಕಾವ್ಯಕ್ಕೆ ಮೌಖಿಕ ಪರಂಪರೆಯುಳ್ಳ ಪುರಾಣ ಮತ್ತು ಐತಿಹ್ಯಗಳೇ ಮೂಲಧಾರ. ಆದ್ದರಿಂದ ಜಾನಪದೀಯವಾಗಿ ಐತಿಹ್ಯಗಳ ಅಧ್ಯಯನ ನಡೆಸುವುದು ಮಹತ್ವವನ್ನು ಪಡೆದುಕೊಳ್ಳುತ್ತದೆ.

ಮಾದಪ್ಪ, ಮಂಟೇಸ್ವಾಮಿ ಹಾಗೂ ಬಿಳಿಗಿರಿರಂಗಯ್ಯ ಅವರು ಚಾಮರಾಜನಗರ ಜಿಲ್ಲೆಯ ಜನಪದ ನಾಯಕರಾಗಿ ಜನ ಮಾನಸದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಇಲ್ಲಿನ ಸೋಲಿಗ ಮತ್ತು ಲಂಬಾಣಿಗರ ವಿಶಿಷ್ಟ ಶೈಲಿಯ ಆಚರಣೆಗಳು ಜಿಲ್ಲೆಯ ಮತ್ತೊಂದು ಹಿರಿಮೆಗೆ ಹಿಡಿದ ಕನ್ನಡಿಯಾಗಿದೆ, ಹಾಗಾಗಿ ಈ ಪ್ರದೇಶದ ಜನಪದ ಕಲಾ ಪ್ರಕಾರಗಳು ಬಹಳ ಮಹತ್ವವಾದ ಪಾತ್ರವನ್ನು ವಹಿಸಿವೆ. ಒಂದೊಂದು ಕಲಾ ಪ್ರಕಾರವು ಅವರದೇ ಆದ ಬೇರೆ ಬೇರೆ ಹಿನ್ನೆಲೆಯನ್ನು ಒಳಗೊಂಡಿವೆ.

ಅವುಗಳೆಂದರೆ ಮಾರಿ ಕುಣಿತ, ಕೋಣನ ಕುಣಿತ, ವೀರಭದ್ರನ ಕುಣಿತ, ಕಂಸಾಳೆ, ನೀಲಗಾರರ ನೃತ್ಯ, ನಂದಿಧ್ವಜ ಕುಣಿತ, ಕೋಲಾಟ, ಗೊರವರ ಕುಣಿತ, ಗಾರುಡಿಗೊಂಬೆ, ಈರಮಕ್ಕಳ ಕುಣಿತ, ಪಿನಾಸಿ ಕುಣಿತ, ತಮಟೆಯ ಕುಣಿತ, ಯಕ್ಷಗಾನ, ಲಿಂಗದಬೀರನ ಕುಣಿತ, ಸೂತ್ರದ ಗೊಂಬೆಯಾಟ, ಪೂಜಾಕುಣಿತ, ಸೋಮನ ಕುಣಿತ ಮತ್ತು ಕೀಲುಕುದುರೆ ಕುಣಿತ ಇನ್ನೂ ಮುಂತಾದವು.

ಚಾಮರಾಜನಗರವು ಜಾನಪದ ಸಂಪತ್ತನ್ನು ಅಡಗಿಸಿಕೊಂಡಿರುವ ಕ್ಷೀರ ಸಾಗರವಾಗಿದೆ. ಜಿಲ್ಲೆಯ ಜನಪದ ಕಲೆಗಳಷ್ಟೇ ಮಹತ್ವವನ್ನು ಐತಿಹ್ಯಗಳು ಪಡೆದುಕೊಂಡಿವೆ. ಉದಾಹರಣೆಗೆ ಕುಂತೂರಿನ ಕೊಳದ ಐತಿಹ್ಯ, ಮರಡಿ ಗುಡ್ಡದ ಐತಿಹ್ಯ, ಎಪ್ಪತ್ತೇಳು ಬೆಟ್ಟದ ಐತಿಹ್ಯ, ಹುಲುಗನ ಮರಡಿ ಮತ್ತು ಹೊಂಡರಬಾಳುವಿನ ಪಾಂಡವರ ಕುರುಹುಗಳು ಕಂಡುಬರುತ್ತವೆ. ಹಾಗೆಯೇ ಇಲ್ಲಿನ ಹಬ್ಬ ಹರಿದಿನಗಳಾದ ಗ್ರಾಮದೇವತೆಗೆ ಸಂಬಂಧಿಸಿದ ಐತಿಹ್ಯಗಳು ಉದಾಹರಣೆಯಾಗಿ ಕೊಳ್ಳೇಗಾಲ ತಾಲ್ಲೂಕಿನ ಪಾಳ್ಯ ಗ್ರಾಮದಲ್ಲಿ ಆಚರಿಸುವ ಸೀಗಮಾರಮ್ಮನ ಹಬ್ಬದಲ್ಲಿನ ನರಬಲಿಯ ಐತಿಹ್ಯ ಹಾಗೂ ಅದೇ ತಾಲ್ಲೂಕಿನ ಸಿಳ್ಕಲ್‌ಪುರದಲ್ಲಿನ ಕೋಣನ ಬಲಿ ಕುರಿತ ಐತಿಹ್ಯ ಇಂತಹ ವಿಶಿಷ್ಟ ಆಚರಣೆಗಳು ಪ್ರಮುಖವಾಗಿವೆ.

ಹೀಗೆ ಒಂದು ಪ್ರದೇಶದ ಸ್ಥಳೀಯ ಇತಿಹಾಸವನ್ನು ತಿಳಿಯಬೇಕಾದರೆ ಐತಿಹ್ಯಗಳು ತನ್ನದೇ ಆದ ಮಹತ್ವವನ್ನು ಹೊಂದಿದ್ದು, ಸಮಾಜಕ್ಕೆ ಪೂರಕವಾದ ಅರಿವನ್ನುಂಟು ಮಾಡುತ್ತವೆ. ಜೊತೆಗೆ ಸಮಾಜವನ್ನು ತಿದ್ದುವ ಕೆಲಸವನ್ನೂ ಸಹ ಮಾಡುತ್ತಿವೆ. ಉದಾಹರಣೆಗೆ ಮಂಟೇಸ್ವಾಮಿ ಕಾವ್ಯದಲ್ಲಿ ಬರುವ 'ಕಲಿ ಸಾರುವ ಸಾಲಿನಲ್ಲಿ ಜಗತ್ತಿನ ಭವಿಷ್ಯವನ್ನು ಹೇಳುತ್ತದೆ. ಇಲ್ಲಿ ಮಂಟೇಸ್ವಾಮಿ ಅವರು ಕಲಿ ಬಂದು ಜಗತ್ತನ್ನು ಆಳುವಾಗ ಸಮಾಜದಲ್ಲಿ ಎಲ್ಲವೂ ವ್ಯತಿರಿಕ್ತವಾಗುತ್ತವೆ ಎಂಬುದಕ್ಕೆ ಈ ಕೆಳಗಿನ ಸಾಲುಗಳಲ್ಲಿ ಸ್ಪಷ್ಟವಾಗಿವೆ.

ಅದು ಅಲ್ಲದೇ ನನ ಕಂದಾ
ನಾಳ ಕಲಿಯುಗದಲ್ಲಿ ಕೇಳಪ್ಪ ನನ ಮಗನೆ
ಅಪ್ಪನ ಮಾತು ಹಿಂದಾಗಿ, ಮಗನ ಮಾತು ಮುಂದಾಗಿ
ಮಗನು ಮಾಡುವ ಸಾಲಕೆ ನಾಳೆ ಅಪ್ಪನೇ ರುಜುವಾಕಬೇಕು

||ಸಿದ್ದಯ್ಯ ಸ್ವಾಮಿ ಬನ್ನಿ||

ನಾಳೆ ಅಪ್ಪ ಮಗನಿಗೊಬ್ಬಳೆ ಹೆಂಡ್ರಾಗಬೇಕು
ನಾಳೆ ಅಪ್ಪ ಮಗಳಿಗೆ ಒಬ್ಬಳೇ ಗಂಡ್ನಾಗಬೇಕು
ನಾಳೆ ಮೇಲು ಕೀಳಾಗಬೇಕು, ಕೀಳೆ ಮೇಲಾಗಬೇಕು

ನಾಳೆ ಊರೇ ಕಾಡಾಗಬೇಕು
ಕಾಡೇ ಊರಾಗಬೇಕು
ನಾಳೆ ಸೇರು, ಪಾವು ಮರೆಯಾಗಿ, ಕೆಜಿ ಬಟ್ಟು ಬರಾಬೇಕು

||ಸಿದ್ದಯ್ಯ ಸ್ವಾಮಿ ಬನ್ನಿ||

ನಲ್ಲಿ ನೀರಿಗೆ ಸುಂಕ, ಕೆರೆ ನೀರಿಗೆ ಸುಂಕ
ಹೊಳೆ ನೀರಿಗೆ ಹೊಡೆದಾಟ, ಕೆರೆ ನೀರಿಗೆ ಕಿತ್ತಾಟ
ಊರಲ್ಲಿರುವ ಬಾವಿ ಬರಬಾವಿಯಾಗಬೇಕು
ದಿಕ್ಕಿಲ್ಲದ ಬಾವಿ ಗುಟ್ಟಾಗಿ ಬರಬೇಕು
ಮುಡ್ಲಾಗಿ ನನ ಕಂದಾ ಜೋಡಿ ಸೂರ್ಯ ಹುಟ್ಟಬೇಕು
ಪಡಗಲಾಗಿ ನನ ಕಂದಾ ಆಕಾಶದ ಮೇಲೆ ಧೋಮಕೇತು ಹುಟ್ಟಬೇಕು
ಭೂಲೋಕದಲ್ಲಿ ಕಂದಾ ಧೋಮಕೇತು ಹುಟ್ಟಿದಾ ಭೂಕಂಪ ಹಾಗಬೇಕು
ನಾಳ ಕಲಿಯುಗದಲ್ಲಿ
ನಾಳೆ ಹುಟ್ಟಂತ ಹೆಣ್ಣು ಮಕ್ಕಳ ಕುಕ್ಕೇಲಿ ಮಾರಬೇಕು
ನಾಳೆ ರಾಜರ ಪಟ್ಟ ಇಳಿಯಬೇಕು, ರಾಣಿಯರ ಪಟ್ಟ ಏರಬೇಕು
ನಾಳೆ ರಾಣಿಯೊಂದಿಗೆ ಹಾಡಿ, ನಾಳೆ ರಾಜನ ತಲೆಗೆ ಬಡಿಯಬೇಕು

||ಸಿದ್ದಯ್ಯ ಸ್ವಾಮಿ ಬನ್ನಿ||

ಹೀಗೆ ಮೌಖಿಕ ಇತಿಹಾಸವುಳ್ಳ ಕಾವ್ಯದಲ್ಲಿ ಬರುವ ಇಂತಹ ಅನೇಕ ಸಾಲುಗಳು ಇಂದಿಗೂ ಸಮಾಜದಲ್ಲಿ ಪ್ರಚಲಿತವಾಗಿದ್ದು, ಪ್ರಸ್ತುತವಾಗಿರುವುದಕ್ಕೆ ನಮ್ಮ ಕಣ್ಣ ಮುಂದಿರುವ ಇಂತಹ ಎಷ್ಟೋ ಐತಿಹ್ಯಗಳು ಸಾಕ್ಷಿಯಾಗಿವೆ. ಅದರಂತೆಯೇ ಸಮಾಜದ ವ್ಯವಸ್ಥೆ ಸಾಗುತ್ತಿರುವುದು ಸತ್ಯವೇ ಆಗಿದೆ. ಇಂತಹ ಐತಿಹ್ಯಗಳ ಅಧ್ಯಯನ ಬಹಳ ಮಹತ್ವಪೂರ್ಣವಾಗಿದೆ. ಹಾಗಾಗಿ ಐತಿಹ್ಯಗಳ ಮಹತ್ವವನ್ನು ಈ ಕೆಳಕಂಡಂತೆ ಕಾಣಬಹುದಾಗಿದೆ.

- ಯಾವುದೇ ಒಂದು ಸಾಂಸ್ಕೃತಿಕ ಅಧ್ಯಯನವು ಗುಣಮಟ್ಟವಾಗಿರಲು ಐತಿಹ್ಯಗಳು ಮುಖ್ಯ ಆಧಾರಗಳಾಗುತ್ತವೆ.
- ಯಾವುದೇ ಸ್ಥಳದ ಐತಿಹಾಸಿಕ ಮಾಹಿತಿ ನೀಡುವಲ್ಲಿ ಐತಿಹ್ಯಗಳು ಮುಖ್ಯ ಪಾತ್ರವಹಿಸುತ್ತವೆ. ಅಲ್ಲದೇ ಸಾಂಸ್ಕೃತಿಕ ಮೌಲ್ಯಗಳನ್ನು ಎತ್ತಿ ಹಿಡಿಯುತ್ತವೆ.
- ಸಾಂಸ್ಕೃತಿಕ ಹಾಗೂ ಐತಿಹಾಸಿಕ ಪ್ರಸಿದ್ಧ ವ್ಯಕ್ತಿಗಳ ಚಿತ್ರಣ ಹಾಗೂ ಜನರಿಗಾಗಿ ಬಾಳಿದ ಅವರ ಶೌರ್ಯವನ್ನು ಸಾರುತ್ತಾ, ಭವಿಷ್ಯದಲ್ಲಿ ಅವರಿಂದ ಕಲಿಯಬಹುದಾದ ಸತ್ಯ-ಮಿಥ್ಯಗಳು ಪ್ರದರ್ಶಿಸುತ್ತವೆ.

- ಮಂಟೇಸ್ವಾಮಿ, ಮಾದಪ್ಪ ಹಾಗೂ ಬಿಳಿಗಿರಿರಂಗನಾಥ ಸ್ವಾಮಿ ಅವರಂತಹ ಸಾಂಸ್ಕೃತಿಕ ಮೂಲಪುರುಷರ ಜೀವನ ವೃತ್ತಾಂತವನ್ನು ಹೇಳುತ್ತವೆ. ಜೊತೆಗೆ ಅವರ ಜೀವನದುದ್ದಕ್ಕೂ ಘಟಿಸಿದ ಘಟನೆಗಳನ್ನು ವಿವರಿಸುತ್ತವೆ.

೮. ಅಧ್ಯಯನದ ಫಲಿತಗಳು

ಐತಿಹ್ಯಗಳು ಮಾನವನ ಸ್ಮೃತಿಫಲ್ಲಟದಲ್ಲಿ ಜನಿಸಿದ ಮೌಖಿಕ ರೂಪವಾದ ಸಾಹಿತ್ಯ. ಇದು ಮೌಖಿಕ ಸಂಪ್ರದಾಯದಲ್ಲಿ ಬೆಳೆದುಕೊಂಡು ಬಂದಿರುವುದು, ಹಿಂದೆ ವಾಸ್ತವವಾಗಿ ನಡೆದದ್ದೇ ಎಂಬುದಾಗಿ ಅದರ ಪ್ರಸಾರಕರಿಗೆ ವಿಶ್ವಾಸವಿರುವ ಘಟನೆಗಳ ಗದ್ಯರೂಪದ ನಿರೂಪಣೆ. ಒಂದು ದೃಷ್ಟಿಯಿಂದ ಇದು ಜನಪದ ಇತಿಹಾಸ. ಒಂದು ಕಾಲದ ನೈಜ ಸಂಸ್ಕೃತಿಯನ್ನು ಸಾರುವ ಐತಿಹ್ಯಗಳು ಮಾನವನ ವಿಕಾಸದ ಹಂತದಲ್ಲಿ ಅವನ ಪ್ರಜ್ಞಾಸೃಷ್ಟಿಯ ಫಲವಾದ ಭಾಷಾ ಸಂಸ್ಕೃತಿಯ ರೂಪವಾಗಿದೆ. ಯಾವುದೇ ಕಾಲ, ಸ್ಥಳ, ಭಾಷೆ, ಸಾಹಿತ್ಯ, ಸಮುದಾಯ ಸಂಸ್ಕೃತಿಯ ನೈಜತೆಯನ್ನು ತೆರೆದಿಡುವಲ್ಲಿ ಪುನರ್‌ಸೃಷ್ಟಿಗೊಳ್ಳುತ್ತಾ ಅಖಂಡ ಚರಿತ್ರೆಯನ್ನು ಅನಾವರಣಗೊಳಿಸುತ್ತವೆ. ಇಂತಹ ಹಲವಾರು ಐತಿಹ್ಯಗಳು ಚಾಮರಾಜನಗರ ಜಿಲ್ಲೆಯ ಉದ್ದಗಲಕ್ಕೂ ವ್ಯಾಪಿಸಿದ್ದು, ಬಿಡಿ ಬಿಡಿಯಾಗಿರುವ ಐತಿಹ್ಯಗಳನ್ನು ಸಂಗ್ರಹಿಸಿ ಹಿಡಿಯಾಗಿ ಮತ್ತು ಸೂಕ್ಷ್ಮವಾಗಿ ಅಧ್ಯಯನ ನಡೆಸಿ, ಎಂಟು ಅಧ್ಯಾಯಗಳಾಗಿ ವಿಂಗಡಿಸಿ 'ಚಾಮರಾಜನಗರ ಜಿಲ್ಲೆಯ ಐತಿಹ್ಯಗಳು' ಎಂಬ ಮಹಾಪ್ರಬಂಧದ ಮೂಲಕ ಐತಿಹ್ಯಗಳ ಪರಿಕಲ್ಪನೆ ಮತ್ತು ಮಹತ್ವವನ್ನು ಬಹುಮುಖಿಯಾಗಿ ಕಟ್ಟಿಕೊಡುವ ಪ್ರಯತ್ನಕ್ಕೆ ಆದ್ಯ ಗಮನವನ್ನು ನೀಡಲಾಗಿದೆ.

ಕನ್ನಡ ಸಾಹಿತ್ಯ ಲೋಕದಲ್ಲಿ ಹೊಸ ಹೊಸ ಆಯಾಮಗಳನ್ನು ಸಂಶೋಧನೆಯ ಮೂಲಕ ದಾಖಲಿಸುವುದು ಸುಲಭದ ಮಾತಲ್ಲ. ನಿರಂತರ ಸಂಶೋಧನಾ ಪ್ರವೃತ್ತಿಯಿಂದ ಸಂಶೋಧನೆಯಲ್ಲಿ ಮಹತ್ವಪೂರ್ಣವಾದ ವಿಷಯವನ್ನು ಸಮಾಜಕ್ಕೆ ನೀಡಬಹುದು. ಸಂಶೋಧನಾ ವಿಷಯದ ಅಂಶಗಳು ಇತರರಿಗೆ ನೆರವಾದಾಗ ಅದು ವಿಶಿಷ್ಟವಾದ ಮಹತ್ವವನ್ನು ಪಡೆದುಕೊಳ್ಳುತ್ತದೆ. ಹಾಗಾಗಿ ಚಾಮರಾಜನಗರ ಜಿಲ್ಲೆಯ ಐತಿಹ್ಯಗಳ ಸಾಹಿತ್ಯ ಮತ್ತು ಸಂಸ್ಕೃತಿಯ ಚಿತ್ರಣವನ್ನು ಏಳು ಅಧ್ಯಾಯಗಳ ಮಹಾಪ್ರಬಂಧದಲ್ಲಿ ಬಹುಮುಖಿಯಾಗಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದ್ದು, ಸಂಶೋಧನೆಯ ಉದ್ದಕ್ಕೂ ಐತಿಹ್ಯಗಳ ಸ್ವರೂಪ ಮತ್ತು ಮಹತ್ವವನ್ನು ಅನಾವರಣಗೊಳಿಸಿ ಅದರ ಫಲಿತವನ್ನು

ಸಾರರೂಪದಲ್ಲಿ ಕೊಡಲಾಗಿದೆ. ಇವೆಲ್ಲವನ್ನೂ ಕ್ರೋಢೀಕರಿಸಿ 'ಚಾಮರಾಜನಗರ ಜಿಲ್ಲೆಯ ಐತಿಹ್ಯಗಳು' ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಸಂಶೋಧನಾ ಫಲಿತಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

೧. ಚಾಮರಾಜನಗರ ಜಿಲ್ಲೆಯು ಸಿದ್ಧಪುರುಷರು ಜೀವಿಸಿದ್ದ ತಾಣವಾಗಿದ್ದು, ಅವರನ್ನು ಇತಿಹಾಸದ ಪುಟಗಳಲ್ಲಿ ಅಲಕ್ಷಿಸಲಾಗಿದೆ. ಇತಿಹಾಸವು ಅವರನ್ನು ಮರೆಮಾಚಿದ್ದರೂ ಜಾನಪದೀಯವಾಗಿ, ಇಲ್ಲಿನ ಜನರ ಕಥೆ, ಲಾವಣಿ, ಪುರಾಣ, ಐತಿಹ್ಯಗಳಲ್ಲಿ ಇನ್ನೂ ಅಜರಾಮರವಾಗಿದ್ದಾರೆ ಎಂಬುದನ್ನು ಕಂಡುಕೊಳ್ಳಲಾಗಿದೆ.

೨. ಸಾಂಸ್ಕೃತಿಕ ನಾಯಕರಾದ ಮಾದಪ್ಪ, ಮಂಟೇಸ್ವಾಮಿ, ಸಿದ್ದಪ್ಪಾಜಿ, ಲಿಂಗಯ್ಯ, ಚೆನ್ನಯ್ಯ, ಹೊನ್ನಯ್ಯ, ಹರಳಯ್ಯ, ಫಲಹಾರದಯ್ಯ, ಮಾಚಯ್ಯ ಅವರುಗಳು ತಳಸಮುದಾಯಗಳನ್ನು ಮೇಲೆತ್ತುವ ಪ್ರಯತ್ನವನ್ನು ಮಾಡಿದ್ದಾರೆ ಎಂಬುದು ಕಂಡುಬರುತ್ತದೆ.

೩. ಸ್ಥಳೀಯ ಜಾನಪದ ಹಿನ್ನೆಲೆಯನ್ನು ಹೊಂದಿರುವ ಹೊಂಗನೂರಿನ ಹಿರಿಯಕ್ಕನ ಕಥೆಗೆ ಪೌರಾಣಿಕ ಪಾತ್ರವಾದ ಕುಂತಿಗೆ, ಗುಂಡ್ಲುಪೇಟೆ ತಾಲ್ಲೂಕಿನ ಹೊನ್ನಜ್ಜಿ ಕಥೆಯು ವೈಭವೀಕರಿಸಿ, ಸ್ಥಳೀಯ ಹಿನ್ನೆಲೆಯನ್ನುಳ್ಳ ಹಿರಿಯಕ್ಕನನ್ನು ಮರೆಮಾಚಿಸಲು ಪ್ರಯತ್ನಿಸಿರುವುದು ತಿಳಿದು ಬರುತ್ತದೆ.

೪. ಗಡಿ ರಾಜ್ಯವಾದ ತಮಿಳು ನಾಡಿನ ರಾಜಧಾನಿ ಚೆನ್ನೈಗೆ ಈ ಭಾಗದ ಶರಣ ಚಳುವಳಿಯ ಮಾದರ ಚೆನ್ನಯ್ಯನ ಹೆಸರು ಕಾರಣವಾಗಿರುವುದನ್ನು ಕಾಣಬಹುದು.

೫. ಇಲ್ಲಿನ ಪ್ರಾಕೃತಿಕ, ಭೌಗೋಳಿಕ, ಸಾಂಸ್ಕೃತಿಕ, ಜಾನಪದೀಯವಾಗಿ ಜಿಲ್ಲೆಯಾದ್ಯಾಂತ ಮಹದೇಶ್ವರ, ಮಂಟೇಸ್ವಾಮಿ ಹಾಗೂ ಬಿಳಿಗಿರಿರಂಗನ ಕಾವ್ಯಗಳಿಂದಲೇ ತುಂಬಿರುವುದನ್ನು ಕಾಣಬಹುದು.

೬. ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಜನರ ಆಡುಭಾಷೆಯಲ್ಲಿ ತಮಿಳು ಪ್ರಭಾವವಿದ್ದರೇ, ಗುಂಡ್ಲುಪೇಟೆ ತಾಲ್ಲೂಕಿನ ಜನರ ಆಡುಭಾಷೆಯಲ್ಲಿ ನೆರೆ ರಾಜ್ಯವಾದ ಕೇರಳದ ಮಲೆಯಾಳಂ ಭಾಷೆಯ ಪ್ರಭಾವವಿರುವುದನ್ನು ನೋಡಬಹುದು.

೭. ವಚನ ಚಳುವಳಿಯ ಭಾಗವಾಗಿದ್ದು, ನಂತರ ಅಲ್ಲಿನ ತಪ್ಪುಗಳಿಂದಾಗಿ ಹೊಸ ಸಂಸ್ಕೃತಿಯನ್ನು ಹುಟ್ಟು ಹಾಕಿ ಸಂಸ್ಕೃತಿಯ ಮೂಲ ಪುರುಷರಾದ ಮಲೆಯ ಮಾದಪ್ಪನನ್ನು 'ಮಾದೇಶ್ವರ'ನನ್ನಾಗಿ ಮತ್ತು ಮಂಟೇದಲಿಂಗಯ್ಯನೆಂದು ಕರೆಸಿಕೊಳ್ಳುತ್ತಿದ್ದ

ಮಂಟೇಸ್ವಾಮಿಯನ್ನು 'ಮಂಟೇದಲಿಂಗೇಶ್ವರ' ಎಂದು ಬಿಂಬಿಸುತ್ತಾ ವೀರಶೈವೀಕರಣಗೊಳ್ಳುತ್ತಿರುವುದನ್ನು ಕಾಣಬಹುದಾಗಿದೆ.

೮. ಇತಿಹಾಸದ ಪುಟಗಳಲ್ಲಿ ಕೇವಲ ಮುನ್ನಲೆಯ ನಾಯಕರಿಗೆ ಮತ್ತು ಪ್ರಬಲ ಕೋಮಿನ ನಾಯಕರಿಗೆ ಮಾತ್ರ ಆದ್ಯತೆಯನ್ನು ನೀಡುತ್ತದೆ. ಅಲ್ಲಿ ಸಾಮಾನ್ಯ ಜನರಿಗೆ ಮನ್ನಣೆಯಿರುವುದಿಲ್ಲ. ಆದರೆ ಜಾನಪದದಲ್ಲಿ ಎಲ್ಲರನ್ನೂ ಪರಿಗಣಿಸುವುದನ್ನು ನಾವು ಕಲಿಯ ಹೊನ್ನಗ ಮುಂತಾದವರಲ್ಲಿ ಕಾಣಬಹುದಾಗಿದೆ.

೯. ಈ ಭಾಗದ ಕಥೆಗಳಲ್ಲಿ ಶಿವನ ಕುರಿತಾದ ಕಥೆಗಳು ಅಧಿಕವಿರುವುದನ್ನು ಗಮನಿಸಿರುವುದರ ಜೊತೆಗೆ ದ್ರಾವಿಡ ಪರಂಪರೆಯ ಪ್ರಭಾವವನ್ನು ಗುರ್ತಿಸಬಹುದು.

೧೦. ಈ ಪ್ರದೇಶದ ಕಥೆಗಳಲ್ಲಿ ಹಸುವು ಯಾವುದಾದರೂ ಹುತ್ತಕ್ಕೂ, ಲಕ್ಕಿ ಗುತ್ತಿಗೂ, ಇನ್ನಿತರ ಪೊದೆಗೂ ಹೋಗಿ ಹಾಲು ಕರೆದುದ್ದನ್ನು ನೋಡಿ ದೇವಾಲಯಗಳ ನಿರ್ಮಾಣವಾಗಿರುವುದನ್ನು ಗಮನಿಸಿದರೇ ಇಲ್ಲಿನ ಜನರು ಗೋವನ್ನು ಕುರಿತು ಪೂಜ್ಯಭಾವನೆಯನ್ನು ಹೊಂದಿದ್ದರೆಂಬುದು ಅರಿವಿಗೆ ಬರುತ್ತದೆ.

೧೧. ಗಡಿ ಜಿಲ್ಲೆಯಾದ ಚಾಮರಾಜನಗರದಲ್ಲಿ ವಿಶಿಷ್ಟವಾದ ನಂಬಿಕೆ ಮತ್ತು ಆಚರಣಾ ಸಂಬಂಧಿ ಐತಿಹ್ಯಗಳಲ್ಲಿರುವ ವೈಶಿಷ್ಟ್ಯತೆಗಳನ್ನು ಕಾಣಬಹುದು.

೧೨. ಹಾರುವಳ್ಳಿ ಮತ್ತು ಸೂರವಳ್ಳಿ ಕೋಟೆಯನ್ನು ಕಟ್ಟುವಾಗ ಆ ಭಾಗದ ಬಾಣಂತಿಯರ ಎದೆಹಾಲನ್ನು ಬಲವಂತವಾಗಿ ಸಂಗ್ರಹಿಸುತ್ತಿದ್ದುದನ್ನು ಗಮನಿಸಿದರೇ, ಆ ಕಾಲಘಟ್ಟದಲ್ಲಿ ಹೆಣ್ಣೆ ಮತ್ತೊಂದು ಹೆಣ್ಣನ್ನು ಹೇಗೆ ಶೋಷಣೆ ಮಾಡುತ್ತಿದ್ದರು ಮತ್ತು ಆಗಿನ ಶಿಶುಗಳ ಸಮಸ್ಯೆಗಳನ್ನು ಅರಿಯಬಹುದು.

೧೩. ಇಡೀ ಜಿಲ್ಲೆಯಲ್ಲಿ ಸಾಂಸ್ಕೃತಿಕ ಸಂಘರ್ಷವೇರ್ಪಟ್ಟಿರುವುದು ತಿಳಿದು ಬರುತ್ತದೆ.

೧೪. ಮಹದೇಶ್ವರ ಮತ್ತು ಮಂಟೇಸ್ವಾಮಿ ಮಹಾಕಾವ್ಯಗಳಲ್ಲಿರುವ ಐತಿಹ್ಯಗಳನ್ನು ಗುರ್ತಿಸಲಾಗಿದೆ.

೧೫. ಅಲುಮೇಲಮ್ಮ ಕೊಟ್ಟ ಶಾಪ ರೂಪದ ಐತಿಹ್ಯ ಇಂದಿಗೂ ಜನಜನಿತವಾಗಿದೆ. ಮೈಸೂರು ಒಡೆಯರಿಗೆ ಮಕ್ಕಳಾಗದಿರುವುದು, ತಲಕಾಡು ಮರಳಾಗಿರುವುದು, ಇದೇ ಜಿಲ್ಲೆಗೆ ಸೇರಿದ ಮಾಲಂಗಿಯು ಮಡುವಾಗಿರುವುದು ನಿಜ ಸತ್ಯತೆ ಐತಿಹ್ಯಗಳ ಅಧ್ಯಯನದ ಮೂಲಕ ದರ್ಶನವಾಗುತ್ತದೆ.

೯. ಮುಂದಿನ ಅಧ್ಯಯನದ ಸಾಧ್ಯತೆಗಳು

'ಚಾಮರಾಜನಗರ ಜಿಲ್ಲೆಯ ಐತಿಹ್ಯಗಳು' ಎನ್ನುವ ಈ ಸಂಶೋಧನಾ ಮಹಾಪ್ರಬಂಧದ ವಿಷಯದ ಕಾರ್ಯಕ್ಷೇತ್ರದ ವ್ಯಾಪ್ತಿಯು ವಿಸ್ತಾರವಾದುದ್ದಾಗಿದೆ. ಆದ್ದರಿಂದ ಎಲ್ಲಾ ಐತಿಹ್ಯಗಳನ್ನು ಅಧ್ಯಯನದ ಚೌಕಟ್ಟಿನೊಳಗೆ ತಂದು ಚರ್ಚಿಸಲು ತುಸು ಸಾಹಸದ ಕೆಲಸವೇ ಸರಿ. ಆದ್ದರಿಂದ ಮುಂದಿನ ಸಂಶೋಧಕರಿಗೆ ಹಲವು ಸಂಶೋಧನಾ ಸಾಧ್ಯತೆಗಳನ್ನು ಸೂಚಿಸಲಾಗಿದೆ.

- ❖ ಚಾಮರಾಜನಗರ ಜಿಲ್ಲೆಯ ಜಾನಪದ ಪರಂಪರೆಯು ವಿಶಾಲವಾಗಿದ್ದು, ಅಪರಿಮಿತವಾದ ಐತಿಹ್ಯಗಳು ಈ ಭಾಗದಲ್ಲಿ ಅಡಕವಾಗಿದ್ದು ಆ ಭಾಗದ ಜನರ ಆಡುಭಾಷೆಯಲ್ಲಿಯೇ ವಿವಿಧ ರೀತಿಯ ಸಂಸ್ಕೃತಿಯನ್ನು ಹೆಣೆದುಕೊಂಡಿದೆ. ಹಾಗಾಗಿ 'ಚಾಮರಾಜನಗರ ಜಿಲ್ಲೆಯ ಐತಿಹ್ಯಗಳನ್ನು ಭಾಷಿಕವಾಗಿ ಅಧ್ಯಯನ ಮಾಡಬಹುದಾಗಿದೆ.
- ❖ ಚಾಮರಾಜನಗರ ಜಿಲ್ಲೆಯ ಕ್ಷೇತ್ರ ವ್ಯಾಪ್ತಿಯು ದೊಡ್ಡದಾಗಿರುವುದರಿಂದ ಪ್ರಾತಿನಿಧಿಕವಾಗಿ ಬಹಳ ಪ್ರಮುಖವಾದ ಐತಿಹ್ಯಗಳನ್ನು ಅಭ್ಯಸಿಸಲಾಗಿದೆ. ಐತಿಹ್ಯಗಳಲ್ಲಿ ಜಿಲ್ಲೆಯ ತಾಲ್ಲೂಕುಗಳನ್ನು ವಿಭಾಗಿಸಿಕೊಂಡು ತಾಲ್ಲೂಕುವಾರು ಐತಿಹ್ಯಗಳ ಅಧ್ಯಯನ ಮಾಡಲು ಅವಕಾಶವಿದೆ.
- ❖ ಚಾಮರಾಜನಗರ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳಲ್ಲೂ ಸಹ ಇತಿಹಾಸಕ್ಕೆ ಸಂಬಂಧಿಸಿದ ಮಾಹಿತಿಗಳು ಹೇರಳವಾಗಿ ಸಿಗುವುದರಿಂದ ಶಾಸನೋಕ್ತವಾಗಿ ಐತಿಹ್ಯಗಳನ್ನು ಅಧ್ಯಯನ ಮಾಡಬಹುದಾದ ಸಾಧ್ಯತೆಗಳು ಇವೆ.
- ❖ ಚಾಮರಾಜನಗರ ಜಿಲ್ಲೆಯ ಐತಿಹ್ಯಗಳನ್ನು ಅಧ್ಯಯನ ಮಾಡಿದಾಗ ನಿಲುವಿಗೆ ಬಂದ ಅಂಶವೆಂದರೆ ಜಿಲ್ಲೆಯ ಐತಿಹ್ಯಗಳಿಗೂ ಇನ್ನಿತರ ಜಿಲ್ಲೆಯ ಐತಿಹ್ಯಗಳಿಗೂ ವಿಭಿನ್ನತೆಗಳು ಕಾಣಿಸುವುದರಿಂದ ಚಾಮರಾಜನಗರ ಜಿಲ್ಲೆಯ ಜೊತೆಗೆ ಕರ್ನಾಟಕ ರಾಜ್ಯವು ಬೇರೆ ಬೇರೆ ಜಿಲ್ಲೆಗಳ ಗಡಿಯನ್ನು ಹಂಚಿಕೊಂಡಿರುವುದರಿಂದ ಆ ಐತಿಹ್ಯಗಳನ್ನು ತೌಲನಿಕ ಅಧ್ಯಯನ ಮಾಡಬಹುದಾದ ಅವಕಾಶವು ಇದೆ.
- ❖ ಚಾಮರಾಜನಗರ ಜಿಲ್ಲೆಯ (ತಳವರ್ಗ) ಅಲಕ್ಷಿತರ ಇತಿಹಾಸ ಎಂಬ ವಿಷಯವನ್ನು ಕುರಿತು ಅಧ್ಯಯನ ಮಾಡಬಹುದಾಗಿದೆ.
- ❖ ಚಾಮರಾಜನಗರ ಜಿಲ್ಲೆಯ ಸಾಂಸ್ಕೃತಿಕ ಸಂಘರ್ಷವನ್ನು ಕುರಿತು ಅಧ್ಯಯನ ಮಾಡಬಹುದಾಗಿದೆ.

ಅನುಬಂಧಗಳು

(ಅ.) ಪರಾಮರ್ಶನ ಗ್ರಂಥಗಳು

1. ಕುಮಾರ್ ಬಿ. ಡಿ. (2009). *ಹಾಸನ ಜಿಲ್ಲೆಯ ಐತಿಹ್ಯಗಳು.* ಮೈಸೂರು ವಿಶ್ವವಿದ್ಯಾನಿಲಯ
2. ಗಿರೀಗೌಡ ಅರಳೀಹಳ್ಳೀ (2018). *ಐತಿಹ್ಯಲೋಕ.* ಗಾಯತ್ರಿ ಪ್ರಕಾಶನ, ಬಳ್ಳಾರಿ
3. ಜವರೇಗೌಡ ದೇ., (1991), *ಜಾನಪದ ಅಧ್ಯಯನ,* ಚೇತನ ಬುಕ್ ಹೌಸ್, ಮೈಸೂರು.
4. ದಾಸೇಗೌಡ, ಡಿ. ವಿ. (2003) *ಕನ್ನಡ ಐತಿಹ್ಯಗಳು.* ಚೇತನ ಬುಕ್ ಹೌಸ್. ಮೈಸೂರು
5. ದಾಸೇಗೌಡ. ಜಿ.ವಿ., (2007), *ನಮ್ಮ ಜನಪದ ನಂಬಿಕೆಗಳು,* ಚೇತನ ಬುಕ್ ಹೌಸ್, ಮೈಸೂರು
6. ನಂಜಯ್ಯ ಹೊಂಗನೂರು, ಎಂ. (2002) ಜಾನಪದ ಸಿರಿ. ಪ್ರಸನ್ನ ಪ್ರಕಾಶನ ಹೊಂಗನೂರು.
7. ನಂಜಯ್ಯ ಹೊಂಗನೂರು, ಎಂ. (2009) *ಸ್ಥಳನಾಮಗಳು. ಪ್ರಸಾರಾಂಗ.* ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ
8. ನಂಜಯ್ಯ ಹೊಂಗನೂರು, ಎಂ. (2018) *ಚಾಮರಾಜನಗರ ತಾಲ್ಲೂಕಿನ ಸ್ಥಳನಾಮಗಳ ಅಧ್ಯಯನ.* ಉನ್ನತಿ ಪ್ರಕಾಶನ. ಮೈಸೂರು
9. ಪಳನಿಸ್ವಾಮಿ (2011) *ಗುಂಡ್ಲುಪೇಟೆ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ.* ಸ್ಕಂದಶ್ರೀ ಪ್ರಕಾಶನ, ಮೂಡುಗೂರು
10. ಪರಮಶಿವಯ್ಯ ಜೀ.ಶಂ. (1972) *ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು.* ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
11. ಪುರುಷೋತ್ತಮ ಬಿಳಿಮಲೆ (1990). *ಕರಾವಳಿ ಜಾನಪದ.* ಪುರುಷೋತ್ತಮ ಬಿಳಿಮಲೆ, ಮಂಗಳಗಂಗೋತ್ರಿ, ದಕ್ಷಿಣ ಕನ್ನಡ
12. ಬೇಕಲರಾಮ ನಾಯಕ (1969) *ತೆಂಕಲನಾಡಿನ ಐತಿಹ್ಯಗಳು.* ಗೀತಾ ಪ್ರಕಾಶನ. ಕಾಸರಗೋಡು

13. ಬೇಕಲರಾಮ ನಾಯಕ (1953) *ಬಾಳಿದ ಹೆಸರು ಮತ್ತು ಇತರ ಐತಿಹ್ಯಗಳು.* ಇಂಡಿಯನ್ ಇಂಡಸ್ಟ್ರಿಯಲ್ ಅಂಡ್ ಏಜೆನ್ಸಿಸ್. ಮಂಗಳೂರು
14. ಮಾಂಬಳ್ಳಿ ಮಹದೇವು ಕೆ. (2018) ಧರೆಗೆ ದೊಡ್ಡವರು ಶ್ರೀಮಂಟೇಸ್ವಾಮಿ : ಜಾನಪದ ಪರಂಪರೆ ಸಮಗ್ರ ಗ್ರಂಥಮಾಲೆ. ಮಾಂಬಳ್ಳಿ ಮಹದೇವು ಕೆ., ಮೈಸೂರು
15. ರಿಚರ್ಡ್ ಕಾರ್ನಾಕ್ ಟೆಂಪಲ್ (1977) *Legends of Punjab*. Educational Societies Press. Bombay
16. ಲಕ್ಷ್ಮಿದೇವಿ ಎ. ಎಲ್ (2011). *ಅವಿಭಜಿತ ಕೋಲಾರ ಜಿಲ್ಲೆಯ ಐತಿಹ್ಯಗಳು.* ವಾಲ್ಮೀಕಿ ಸಾಹಿತ್ಯ ಸಂಪದ.
17. ಲಕ್ಷ್ಮಣ ಕೌಂಟಿ (2023) ಧರೆಯ ತಂದವರು : ಸಿದ್ದಪ್ಪಾಜಿ, ರಾಚಪ್ಪಾಜಿ, ಚನ್ನಾಜಮ್ಮ ಹಾಗೂ ಇತರ ಮಂಟೇಸ್ವಾಮಿ ಶಿಷ್ಯರ ಕುರಿತಾದ ಚಾರಿತ್ರಿಕ ಕಾದಂಬರಿ. ಬೋಧಿ ಪ್ರಕಾಶನ. ಕಲಬುರಗಿ
18. ವಸು (2004) *ಮೌಖಿಕ ಇತಿಹಾಸ.* ಅಂಕಿತ ಪುಸ್ತಕ. ಬೆಂಗಳೂರು
19. ವಿಲಿಯಂ ಕ್ರುಕ್ (1894) *The Popular Religion and Folklore of Northern India*. Government Press, Allahabad
20. ವೃಷಭಕುಮಾರ್ (2010) *ಮೈಸೂರು ಜಿಲ್ಲೆಯ ಐತಿಹ್ಯಗಳು.* ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು
21. ಶಿವರೂಪಿ (ನ.ದ.) ಕಾಲಜ್ಞಾನಿಗಳು ಮಂಟೇಸ್ವಾಮಿಯವರು. ತೆಗೆದುಕೊಂಡ ದಿನಾಂಕ. ಆಗಸ್ಟ್ 16, 2024, ಯಿಂದ https://www.youtube.com/watch?v=0qTDkDFuxxs
22. ಸ್ವಾಮಿ. ಬಿ. ಎಸ್. (1993) *ಮಲೆಯ ಮಾದೇಶ್ವರ : ಒಂದು ಅಧ್ಯಯನ.* ನವೀನ ಪ್ರಕಾಶನ. ಬೆಂಗಳೂರು

ಶ್ರೀಮತಿ ಸತ್ಯಶೀಲ ಜಿ. ಎಂ.
ಸಂಶೋಧಕರು

ಪ್ರೊ. ಸೋಮಣ್ಣ
ಮಾರ್ಗದರ್ಶಕರು